*ಹೆಚ್.ಎನ್. ವಿಶ್ವನಾಥ್, ಶಿವಮೊಗ್ಗ*
*ಮೊಸಳೆ ಕಣ್ಣೀರು ಸಹಜವೋ, ಅಸಹಜವೋ?*



ಮೊಸಳೆಗೆ ಸಹಜ, ಮಾನವನಿಗೆ ಅಸಹಜ!

*ಜೆ.ಪ್ರದೀಪಕುಮಾರ, ಹೂವಿನಹಡಗಲಿ*
*ಗಂಡನ ಸಿಟ್ಟಿಗೂ, ಹೆಂಡತಿಯ ಸಿಟ್ಟಿಗೂ ಏನು ವ್ಯತ್ಯಾಸ?*
ಗಂಡನ ಸಿಟ್ಟು ಸಿಡಿಲಿನ ಅಬ್ಬರದಂತೆ, ಹೆಣ್ಣಿನ ಸಿಟ್ಟು ಗುಡುಗು ಸಿಡಿಲುಗಳೊಡಗೂಡಿದ ಭೀಕರ ಚಂಡಮಾರುತ!

*ಮಹಾವೀರ ಕಾಸಾರ, ಚನ್ನಗಿರಿ*
*ಧರ್ಮೇಚ, ಅರ್ಥೇಚ, ಕಾಮೇಚ ನಾತಿಚರಾಮಿ ಎಂದು ಮದುಮಗನಿಂದ ಮಾತ್ರ ಹೇಳಿಸುವುದೇಕೆ?*
ತಿರುಗದ ಚಕ್ರಕ್ಕೆ ಬ್ರೇಕ್‌ನ ಅಗತ್ಯವಿರುವುದಿಲ್ಲ.

*ಅಭಿಷೇಕ್ ರೆಡ್ಡಿ, ಗೌರಿಬಿದನೂರು*
*ಹಸುವಿನ ಹಾಲು ಮಾಂಸಾಹಾರವೇ?*




ಕರು ಸಸ್ಯಾಹಾರಿಯಾದ್ದರಿಂದ ಹಾಲು ಮಾಂಸಾಹಾರವಲ್ಲ.

*ಬಿ.ಎಸ್. ರಮೇಶ್, ಬೆಂಗಳೂರು*
*ಅಮ್ಮಾ ಎಂದರೆ ಏನೋ ಹರುಷವು, ಮಮ್ಮಿ ಎಂದರೆ..?*
ಕಾನ್ವೆಂಟ್‌ನೊಳು ಸೀಟ್ ದೊರೆತವು!

*ನೆ.ಸು. ಆನಂದ, ಬೆಂಗಳೂರು*
*ಮೊನಚಾಗಿ ಉತ್ತರ ಹೊರಹೊಮ್ಮಿಸುವ ನಿಮ್ಮ ಪೆನ್ನನ್ನು ಖರೀದಿಸುವ ಆಶಯ ನನ್ನದು. ದೊರಕುವ ಸ್ಥಳ ತಿಳಿಸುವಿರಾ?*
ಏಕೆ ಸ್ವಾಮಿ? ನಾನು ಇನ್ನೂ ಹಲವು ವರ್ಷ ಈ ಅಂಕಣ ಬರೆಯುವುದು ನಿಮಗೆ ಇಷ್ಟ ಇಲ್ಲವೇ? ಆ ಪೆನ್ನು ಕೊಟ್ಟುಬಿಟ್ಟರೆ ಈ ತಲೆ ವ್ಯರ್ಥ!

*ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ*
*ದೇವಸ್ಥಾನವೊಂದರಲ್ಲಿ ಜಾತಕ ನೋಡುವುದಿಲ್ಲವೆಂದು ಫಲಕ ಹಾಕಿದ್ದಾರೆ?*
ಅಲ್ಲಿಗೆ ಅಲ್ಲಿಯ ದೇವನ ಹಾಗೂ ಪೂಜಾರಿಯ ಗ್ರಹಚಾರ ಎಂದಿಗೂ ಚೆನ್ನಾಗಿರುತ್ತದೆ ಎಂದಾಯಿತು.

*ಬಿ.ಎಂ. ಪರಶಿವಮೂರ್ತಿ, ಬೆಂಗಳೂರು*
*ನೈತಿಕ ಸಂಬಂಧಕ್ಕೂ, ಅನೈತಿಕ ಸಂಬಂಧಕ್ಕೂ ಏನು ವ್ಯತ್ಯಾಸ?*
ಅನೈತಿಕ ಸಂಬಂಧಗಳಿಂದ ಮಾಧ್ಯಮಗಳಿಗೆ ಲಾಭವಿದೆ!

*ಡಿ.ಎಸ್. ಪಂಕಜ ಸುಬ್ರಮಣ್ಯ, ಬೆಂಗಳೂರು*
*ಹಣ, ಹಣ ಎಂದು ದೊಡ್ಡವರೆಲ್ಲಾ ಲೂಟಿ ಹೊಡೆಯುವರಲ್ಲಾ, ಸತ್ತಾಗ ಹಿಂದೆ ಬರುತ್ತಾ..?*
ಹೆಂಡತಿ ಬರುವಳೇನು? ಮಕ್ಕಳು? ಇವೆರಡೂ ಮಿತಿಯಲ್ಲಿರುವಂತೆ ಅದೂ ಮಿತಿಯಲ್ಲಿ ಬೇಕೇ ಬೇಕು. ಅತಿಂ ಸರ್ವತ್ರ ವರ್ಜಯೇತ್ ಅಷ್ಟೆ.

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*
*ಅಲ್ರಪ್ಪೋ ಹೆಣ್ಣಿನ ಕಣ್ಣಿನ ನೋಟಕ್ಕೆ, ಮುಗುಳ್ನಗೆಗೆ ಬಲಿಯಾಗದೆ ಇರುವವನಿಗೆ ನಿಮ್ಮ ಉಪದೇಶ?*
ನಾನು ಪುರುಷನಲ್ಲ ಎಂದು ಮೊದಲೇ ಡಿಕ್ಲೇರಿಸಿ ಬಿಡದಿಯ ಸ್ವಾಮಿಯಾಗಿ ಬೊಗಳೆ ಬಾಳು ಬಾಳ್ವೆ!

*ವಿ. ಹಮೀದ್, ವಿಟ್ಲ*
*ತಾಳಿ ಕಟ್ಟುವಾಗ ವರನ ಕೈ ನಡುಗಲು ಕಾರಣವೇನು ಸಾರ್?*
ಅದು ಕೈಯಾರೆ ಕಷ್ಟಗಳ ಸರಮಾಲೆಯನ್ನು ಗಂಟು ಹಾಕಿಕೊಳ್ಳುತ್ತಿರುವೆಯಲ್ಲಾ ಎಂದು ಕೈ ಸೂಚಿಸುವ ಪರಿಯಂತೆ.

*ಏರ್‌ಫೋರ್ಸ್ ಕುಮಾರ್, ಹೆಡತಲೆ*
*ನಮ್ಮ ಮೂರ್ಖಪ್ರಶ್ನೆಗಳಿಗೆ ಉತ್ತರಿಸುವಾಗ ನಿಮಗೆ ಕೋಪ ಬರುವುದಿಲ್ಲವೇ ಕಮ್ಯಾಂಡರ್?*
ಎಲ್ಲಾದರೂ ಉಂಟೇ! ಮಕ್ಕಳ ಮುಗ್ಧಪ್ರಶ್ನೆಗಳಿಗೆ ತಾಯಿ ಮುನಿಸಿಕೊಳ್ಳುವುದು ಅಸಂಭವ ಡಿಮ್ಯಾಂಡರ್!

*ಕೇಶವ ಎನ್ ಪೈ, ಕಾಸರಗೋಡ*
*ರಾಮನಿಗಿಂತ ರಾಮನಾಮವೇ ಏಕೆ ದೊಡ್ಡದು?*
ರಾಮ ಎರಡಕ್ಷರ, ರಾಮನಾಮ ನಾಲ್ಕಕ್ಷರ!

## ಬಹುಮಾನಿತ ಪ್ರಶ್ನೆ

*ರವಿಚಂದ್ರ, ಕೆಂಗಾರಿ*
*ಪಕ್ಕದೂರಿನ ಸ್ವಾಮಿಯೊಬ್ಬ ಕ್ಯಾಮರಾ ಕಂಡರೆ ಸಿಡಿದು ಬೀಳುತ್ತಾನೆ. ಕಾರಣ ಏನಿರಬಹುದು?*
ಕ್ಯಾಮರಾಗೆ ಚೂರೂ ನಾಚಿಕೆಯಿಲ್ಲ, ನೋಡಬಾರದ್ದನ್ನೆಲ್ಲಾ ನೋಡುತ್ತದೆ ಎಂಬುದು ಆ ಸ್ವಾಮಿಯ ಅಭಿಮತವಂತೆ.

*ಎಂ.ಜಿ. ನೇಹವರ್ಷಿಣಿ, ಬಳ್ಳಾರಿ*
*ಮಂತ್ರಿಗಳು ತಮ್ಮ ತಪ್ಪನ್ನು ಕನ್ನಡಿಯಲ್ಲಿ ನೋಡಿ, ಇನ್ನೊಬ್ಬರ ತಪ್ಪನ್ನು ಭೂತಗನ್ನಡಿಯಲ್ಲಿ ನೋಡುವುದು ಏಕೆ?*
ಭೂತಾಕಾರವಾಗಿ ಬೆಳೆಸಬೇಕಾದುದನ್ನು ಭೂತಗಳು ಭೂತಗನ್ನಡಿಯಲ್ಲಿ ನೋಡುವುದು ಸಹಜ!

*ಭಾರತಿ ಮಾನಗೆ, ಹೊನ್ನಾವರ*
*ಭಾರತದಲ್ಲಿ ಬಡವ, ಬಲ್ಲಿದನೆಂಬ ಭೇದವಿಲ್ಲದಿರುವುದು ಎಲ್ಲಿ?*
ಟ್ರಾಫಿಕ್ ಸಿಗ್ನಲ್‌ನಲ್ಲಿ!

*ನರಸಿಂಹ ಎಂ, ಪೈ, ಕಾಸರಗೋಡ*
*ಬಾನಿಗೇರಿದ ಬೆಲೆಗಳು ಭುವಿಗಿಳಿಯುವುದು ಯಾವಾಗ?*




ಎಂದಿಗೂ ಇಲ್ಲ; ಬೆಲೆಗಳ ಪಥ ಒನ್ ವೇ!

*ಸಾವಿತ್ರಮ್ಮ ಕೆ. ವಿಭೂತಿ, ಹರಿಹರ*
*ಕೆಲವರ ವರ್ತನೆಯಲ್ಲಿ ಪರಿವರ್ತನೆಯೇ ಆಗುವುದಿಲ್ಲ; ಏಕೆ?*
ಕೇಳಿದ್ದನ್ನೇ ಕೇಳುವವರು, ನೋಡಿದ್ದನ್ನೇ ನೋಡುವವರು ಇರುವವರೆಗೂ ಮಾಡಿದ್ದನ್ನೇ ಮಾಡುವುದು ಸರಿ ಎಂಬ ಅಭಿಪ್ರಾಯವಂತೆ.

*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ಸರ್ಕಾರದ ಕೆಲಸ ದೇವರ ಕೆಲಸ ಇದರ ನಿಜವಾದ ಅರ್ಥವೇನು?*
ನೈವೇದ್ಯ ನೀಡದಿದ್ದರೆ ಫಲ ದೊರಕದು ಎಂದು!

■ ರಾಮ್